**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ**

**ಸ್ಪೆಷಲ್(ಕರಪ್ಷನ್) ಕೇಸ್ ಸಂಖ್ಯೆ: 61/2016**

ಪ್ರಾ.ಸಾ: 2
ಚಾ.ಸಾ: 2

ಸಾಕ್ಷಿದಾರರ ಹೆಸರು : ಬಿ ಡಿ ರಮೇಶ್

ತಂದೆಯ ಹೆಸರು : ದೇವೇಗೌಡ

ವಯಸ್ಸು : 65 ವರ್ಷ

ವೃತ್ತಿ : ನಿವೃತ್ತ ಉಪ-ವಲಯ ಅರಣ್ಯಾಧಿಕಾರಿ

ವಾಸ : ಬೆಂಗಳೂರು

**ಸಾಕ್ಷಿಯನ್ನು ದಿನಾಂಕ 26.08.2022 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದ:</u>**

1. 2013ನೇ ಸಾಲಿನಲ್ಲಿ ನಾನು ಬೆಂಗಳೂರಿನ ವಲಯ ಅರಣ್ಯಾಧಿಕಾರಿಗಳ ಕಛೇರಿಯಲ್ಲಿ ಉಪ-ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ಮಾಡುತ್ತಾ ಇದ್ದೆನು.

2. ದಿನಾಂಕ 23.05.2013 ರಂದು ನಮ್ಮ ಅಂದಿನ RFO ಆದ ಶ್ರೀ ಗಣೇಶ್ ರವರು ನನ್ನನ್ನು ಮತ್ತು ನಮ್ಮ ಕಛೇರಿಯಲ್ಲಿಯೇ ಕೆಲಸ ಮಾಡುತ್ತಾ ಇದ್ದ ಮಂಗಳಲಕ್ಷ್ಮಿ ಎನ್ನುವವರನ್ನು ಕರೆದರು ಮತ್ತು ನಮ್ಮನ್ನು ಉದ್ದೇಶಿಸಿ "ನೀವಿಬ್ಬರೂ ಈಗಲೇ ಕರ್ನಾಟಕ ಲೋಕಾಯುಕ್ತ ಕಛೇರಿಗೆ ಹೋಗಿ report ಮಾಡಿಕೊಳ್ಳಬೇಕು" ಎಂದು ಸೂಚಿಸಿದರು. ಅದೇ ಪ್ರಕಾರ ನಾನು ಮತ್ತು ಮೇಲೆ ಹೇಳಿದ ಮಂಗಳ ಲಕ್ಷ್ಮಿ ರವರು ನಮ್ಮ ಕಛೇರಿಯಿಂದ ಹೊರಟು ಸಂಜೆ 5 ಗಂಟೆ ವೇಳೆಗೆ ಲೋಕಾಯುಕ್ತ ಕಛೇರಿಗೆ ಹೋಗಿ ಅಲ್ಲಿ ಹಾಜರು ಇದ್ದ ಡಿವೈಎಸ್‌ಪಿ ಆದ ದುರ್ಗಯ್ಯ ರವರಿಗೆ report ಮಾಡಿಕೊಂಡೆವು. ನಂತರ ಸದರಿ ದುರ್ಗಯ್ಯ ರವರು ನನ್ನನ್ನು ಮತ್ತು ಮಂಗಳಲಕ್ಷ್ಮಿ ರವರನ್ನು ಉದ್ದೇಶಿಸಿ "ನೀವಿಬ್ಬರೂ ನಾಳೆ ಬೆಳಗ್ಗಿನ ಜಾವ 5.30 ಗಂಟೆಗೆ ಲೋಕಾಯುಕ್ತ ಕಛೇರಿಗೆ ಬನ್ನಿರಿ" ಎಂದು ಸೂಚಿಸಿದರು.

3. ಅದೇ ಪ್ರಕಾರ ನಾನು ಮತ್ತು ಮಂಗಳಲಕ್ಷ್ಮಿ ರವರು ಮಾರನೇ ದಿನ ಅಂದರೆ ದಿನಾಂಕ 24.05.2013 ರಂದು ಬೆಳಗ್ಗಿನ ಜಾವ 5.30 ರ ವೇಳೆಗೆ ಬೆಂಗಳೂರಿನ ಲೋಕಾಯುಕ್ತ ಕಛೇರಿಗೆ ಹೋದೆವು. ಆ ಕಛೇರಿಯಲ್ಲಿ ಆ ಅಧಿಕಾರಿಗಳು ನನ್ನನ್ನು ಮತ್ತು ಮಂಗಳಲಕ್ಷ್ಮಿ

ರವರನ್ನು ಕರೆದುಕೊಂಡು ಬೆಂಗಳೂರಿನ HSR layout ನಲ್ಲಿ ಇರುವ ರಂಗಸ್ವಾಮಿ ಎನ್ನುವವರ ಮನೆಗೆ ಕರೆದುಕೊಂಡು ಹೋದರು. ಆ ಮನೆಯ ಮುಂದೆ ಇಂದಿರಾ ನಿಲಯ ಎಂಬ ಹೆಸರು ಇತ್ತು ಮತ್ತು ಆ ಮನೆಯ ಸಂಖ್ಯೆ 1072 ಆಗಿತ್ತು, ಆದರೆ ಈ ಘಟನೆಯು ಆಗಿ ಸುಮಾರು 10 ವರ್ಷಗಳು ಆಗಿರುವ ಕಾರಣದಿಂದ ಆ ಮನೆಯು ಇದ್ದ ಕ್ರಾಸ್ ಸಂಖ್ಯೆ ಹೇಳಲು ನೆನಪಿಲ್ಲ. ಆ ಮನೆಯಲ್ಲಿ ಒಂದು cellar ಇತ್ತು ಮತ್ತು ನಾವು cellar ಗೆ ಹೋಗಿ ಅಲ್ಲಿಂದ ಮೆಟ್ಟಿಲುಗಳನ್ನು ಹತ್ತಿಕೊಂಡು ಆ ಕಟ್ಟಡದ ಮೊದಲನೇ ಮಹಡಿಗೆ ಹೋದೆವು. ಆ ಮೊದಲನೇ ಮಹಡಿಯಲ್ಲಿ ಒಂದೇ ಒಂದು ಮನೆ ಇತ್ತು ಮತ್ತು ಆ ಮನೆಯ ಕಾಲಿಂಗ್ ಬೆಲ್ ಮಾಡಿದೆವು, ಆದರೆ ಆ ಮನೆಯವರು ಬಾಗಿಲು ತೆಗೆಯಲಿಲ್ಲ. ಆಗ ನಾನು ಮತ್ತು ಲೋಕಾಯುಕ್ತ ಅಧಿಕಾರಿಗಳು ಮತ್ತು ಮಂಗಳಲಕ್ಷ್ಮಿ ರವರು ವಾಪಸ್ಸು ಆ ಕಟ್ಟಡದ cellar ಭಾಗಕ್ಕೆ ಬಂದೆವು ಮತ್ತು ಆ cellar ಭಾಗದಲ್ಲಿ ಓರ್ವ ರಾಣಿ ಎನ್ನುವವರು ಸಿಕ್ಕಿದರು ಮತ್ತು ಆ ರಾಣಿ ರವರನ್ನು ಇನ್ಸ್‌ಪೆಕ್ಟರ್ ರವರು ವಿಚಾರಿಸಿದರು ಆಗ ಆ ರಾಣಿ ಎನ್ನುವವರು ತಮ್ಮನ್ನು ತಾವು ಆ ಮನೆಯಲ್ಲಿ ಕೆಲಸ ಮಾಡುವ ನೌಕರಳು ಎಂದು ಪರಿಚಯ ಮಾಡಿಕೊಂಡರು.

4. ಮುಂದುವರೆದು ಸದರಿ ರಾಣಿ ರವರು "ಆ ಮನೆಯವರು ಬೇರೆ ಊರಿಗೆ ಹೋಗಿದ್ದಾರೆ" ಎಂಬುದಾಗಿ ಹೇಳಿದರು. ನಂತರ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಆ ರಾಣಿರವರನ್ನು "ಆ ಮನೆಯವರು ಯಾವಾಗ ಬರುತ್ತಾರೆ" ಎಂದು ಕೇಳಿದರು ಅದಕ್ಕೆ ರಾಣಿ ರವರು "ನನಗೆ ಗೊತ್ತಿಲ್ಲ" ಎಂದು ನುಡಿದರು. ಆ ಸಮಯದಲ್ಲಿ ಆ ರಾಣಿ ರವರ ಜೊತೆ ಆಕೆಯ ಮಗ ಆದ ಸುಮಂತ ರವರು ಇದ್ದರು ಮತ್ತು ಸುಮಂತನನ್ನು ಪೊಲೀಸ್ ಅಧಿಕಾರಿಗಳು ಕೇಳಿದಾಗ ಆ ಸುಮಂತನು ಆ ಮನೆಯಲ್ಲಿ ವಾಸ ಇರುವ ವ್ಯಕ್ತಿಯ ಸಂಚಾರಿ ದೂರವಾಣಿಯ ಸಂಖ್ಯೆಯನ್ನು ಕೊಟ್ಟನು. ನಂತರ ಲೋಕಾಯುಕ್ತ ಪೊಲೀಸ್ ಅಧಿಕಾರಿಯು ಆ ಸಂಚಾರಿ ದೂರವಾಣಿ ಸಂಖ್ಯೆಗೆ ಕರೆ ಮಾಡಿದರು ಮತ್ತು ಮಾತನಾಡಿದರು ಮತ್ತು ಮತ್ತೊಂದು ಕಡೆಯಿಂದ ಮಾತನಾಡುತ್ತಿದ್ದ ವ್ಯಕ್ತಿಯು "ನಾವು ಹೊರಗಡೆ ಹೋಗಿದ್ದೇವೆ ವಾಪಸ್ಸು ಬರುವುದಕ್ಕೆ 3-4 ದಿನಗಳು ಆಗುತ್ತವೆ" ಎಂಬುದಾಗಿ ನುಡಿದರು.

5. ನಂತರ ಲೋಕಾಯುಕ್ತ ಪೊಲೀಸರು ನನ್ನನ್ನು ಮತ್ತು ಮಂಗಳಲಕ್ಷ್ಮಿ ರವರನ್ನು ಕರೆದುಕೊಂಡು ವಾಪಸ್ಸು ಮೊದಲನೆ ಮಹಡಿಗೆ ಹೋದರು ಮತ್ತು ಅಲ್ಲಿ ಇದ್ದ ಮನೆಯ ಬಾಗಿಲಿಗೆ ಸೀಲು ಹಾಕಿದರು ಮತ್ತು cellar ನಲ್ಲಿ ಸಹಾ ಇದ್ದ ಬಾಗಿಲಿಗೆ ಸೀಲು ಹಾಕಿದರು.

6. ಈಗ ನನಗೆ ತೋರಿಸಿದ ದಾಖಲೆಯಲ್ಲಿ ಅಂದರೆ ಶೋಧನಾ ಪಂಚನಾಮೆ ಎಂಬ ತಲೆಬರಹ ಇರುವ ದಾಖಲೆಯಲ್ಲಿ ಇರುವ ಸಹಿಯು ನನ್ನ ಸಹಿ ಆಗಿದೆ. ಸದರಿ ದಾಖಲೆಯನ್ನು **ನಿಪಿ-2** ಎಂದು ಮತ್ತು ಈ ಸಾಕ್ಷಿಯ ಸಹಿಗಳನ್ನು **ನಿಪಿ-2(ಎ), ನಿಪಿ-2(ಬಿ)** ಮತ್ತು **ನಿಪಿ-2(ಸಿ)** ಎಂದು ಗುರುತಿಸಿದೆ.

7. ಆ ರೀತಿ ಆ ಮನೆಯ ಬಾಗಿಲಿಗೆ ಸೀಲು ಹಾಕಿದ ನಂತರ ಆ ಪೊಲೀಸ್ ಅಧಿಕಾರಿಗಳು ನನ್ನನ್ನು ಮತ್ತು ಮಂಗಳಲಕ್ಷ್ಮಿ ರವರನ್ನು ವಾಪಸ್ಸು ಲೋಕಾಯುಕ್ತ ಕಛೇರಿಗೆ ಕರೆದುಕೊಂಡು ಬಂದರು ಮತ್ತು ನಮ್ಮನ್ನು ಉದ್ದೇಶಿಸಿ "ನಾವು ಹೇಳಿ ಕಳುಹಿಸಿದಾಗ ಮತ್ತೊಮ್ಮೆ ನೀವುಗಳು ಬರಬೇಕು" ಎಂದು ನಮಗೆ ಹೇಳಿ ನಮ್ಮನ್ನು ಕಳುಹಿಸಿದರು.

8. ನಂತರ ದಿನಾಂಕ 30.05.2013 ರಂದು ಸಂಜೆ 4 ಅಥವಾ 5 ಗಂಟೆ ಸಮಯದಲ್ಲಿ ಸದರಿ ಲೋಕಾಯುಕ್ತ ಇಲಾಖೆಯ ಡಿವೈಎಸ್‌ಪಿ ರವರು ನನಗೆ ದೂರವಾಣಿ ಕರೆ ಮಾಡಿದರು ಮತ್ತು ಮಾರನೇ ದಿನ ಅಂದರೆ ದಿನಾಂಕ 31.05.2013 ರಂದು ಲೋಕಾಯುಕ್ತ ಕಛೇರಿಗೆ ಬೆಳಿಗ್ಗೆ 9 ಗಂಟೆಗೆ ಬರಬೇಕು ಎಂದು ಸೂಚಿಸಿದರು.

9. ಅದೇ ಪ್ರಕಾರ ನಾನು ಮತ್ತು ಮಂಗಳಲಕ್ಷ್ಮಿ ರವರು ದಿನಾಂಕ 31.05.2013 ರಂದು ಬೆಳಿಗ್ಗೆ 9 ಗಂಟೆ ವೇಳೆಗೆ ಬೆಂಗಳೂರಿನ ಲೋಕಾಯುಕ್ತ ಕಛೇರಿಗೆ ಹೋದೆವು. ನಂತರ ಲೋಕಾಯುಕ್ತ ಕಛೇರಿಯಿಂದ ಲೋಕಾಯುಕ್ತ ಅಧಿಕಾರಿಗಳು ನನ್ನನ್ನು ಮತ್ತು ಮಂಗಳಲಕ್ಷ್ಮಿ ರವರನ್ನು ಕರೆದುಕೊಂಡು ಬೆಂಗಳೂರಿನ HSR layout ಗೆ ಹೋದರು.

10. ಆ ದಿನದ ವೇಳೆಗೆ ರಂಗಸ್ವಾಮಿ ರವರು ದೆಹಲಿಯಿಂದ ವಾಪಸ್ಸು ಬಂದಿದ್ದರು. ಸದರಿ ರಂಗಸ್ವಾಮಿ ರವರು ಮೇಲೆ ಹೇಳಿದ ಇಂದಿರಾ ನಿಲಯದ ಮನೆಯಲ್ಲಿ ವಾಸ ಇರುವ ವ್ಯಕ್ತಿ ಆಗಿದ್ದರು. ಅದೇ ವೇಳೆಗೆ ಮೈಸೂರಿನ ಎಸ್.ಪಿ ರವರು ಸಹಾ ಆ ಸ್ಥಳಕ್ಕೆ ಬಂದರು ಮತ್ತು ಮೈಸೂರಿನ ಎಸ್.ಪಿ ರವರ ಜೊತೆ ಮಡಿಕೇರಿಯ ಲೋಕಾಯುಕ್ತ ಇಲಾಖೆಯ circle inspector ರವರು ಸಹಾ ಬಂದರು. ನಾವು ಆ ಇಂದಿರಾ ನಿಲಯದ ಸಮೀಪ ಹೋಗುವ ವೇಳೆಗೆ ಆ ಮನೆಯಲ್ಲಿ ವಾಸ ಇದ್ದ ವ್ಯಕ್ತಿ ಆದ ರಂಗಸ್ವಾಮಿ ರವರು ಸಹಾ ಅಲ್ಲಿಗೆ ಬಂದರು. ನಂತರ ಮೈಸೂರಿನ ಎಸ್.ಪಿ ರವರು ಮತ್ತು ಲೋಕಾಯುಕ್ತ ಪೊಲೀಸರು ಆ ವ್ಯಕ್ತಿಗೆ ಅಂದರೆ ಇಂದಿರಾ ನಿಲಯದಲ್ಲಿ ವಾಸ ಇದ್ದ ವ್ಯಕ್ತಿಗೆ search warrant ಅನ್ನು ತೋರಿಸಿದರು ಮತ್ತು ಆತನನ್ನು ಮತ್ತು ನಮ್ಮನ್ನು ಕರೆದುಕೊಂಡು ಪೊಲೀಸ್ ಅಧಿಕಾರಿಗಳು ಆ ಕಟ್ಟಡದ cellar ಭಾಗದಿಂದ ಮೆಟ್ಟಿಲುಗಳನ್ನು ಹತ್ತಿಕೊಂಡು ಮೊದಲನೇ ಮಹಡಿಗೆ ಹೋದೆವು.

ಸದರಿ warrant ನಲ್ಲಿ ನನ್ನ ಸಹಿ ಇದೆ. ಸದರಿ warrant ಅನ್ನು **ನಿಪಿ-3** ಎಂದು ಗುರುತಿಸಿದೆ ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-3(ಎ)** ಎಂದು ಗುರುತಿಸಿದೆ. ಇದೇ warrant ನ ನಕಲು ಸಹಾ ಕಡತದಲ್ಲಿ ಲಭ್ಯ ಇದೆ. ಆ ನಕಲನ್ನು **ನಿಪಿ-3(ಬಿ)** ಎಂದು ಗುರುತಿಸಿದೆ. ಸದರಿ ನಿಪಿ-3(ಬಿ) ರಲ್ಲಿ ಇರುವ ಈ ಸಾಕ್ಷಿಯ ಸಹಿಯನ್ನು **ನಿಪಿ-3(ಸಿ)** ಎಂದು ಗುರುತಿಸಿದೆ.

11. ಇಂದಿರಾ ನಿಲಯದಲ್ಲಿ ವಾಸ ಇದ್ದ ವ್ಯಕ್ತಿಯ ಹೆಸರು ರಂಗಸ್ವಾಮಿ ಆಗಿದೆ. ಆ ರಂಗಸ್ವಾಮಿ ರವರ ಸಮಕ್ಷಮದಲ್ಲಿ ಮತ್ತು ನಮ್ಮಗಳ ಸಮಕ್ಷಮದಲ್ಲಿ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಆ ಮನೆಗೆ ಹಾಕಿದ್ದ ಸೀಲನ್ನು open ಮಾಡಿದರು. ಮೊದಲಿಗೆ ಆ ಕಟ್ಟಡದ cellar ನಲ್ಲಿ ಸುಮಾರು 80 ಹೂ-ಕುಂಡಗಳು ಇದ್ದವು ಮತ್ತು ಅವುಗಳನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡರು. ಸದರಿ cellar ನಲ್ಲಿ ಒಂದು ಕೊಠಡಿ ಇತ್ತು ಮತ್ತು ಆ ಕೊಠಡಿಯ ಒಳಗಡೆ ಮಂಚ, ಸೋಫಾಸೆಟ್, ಫ್ಯಾನು, ಕುರ್ಚಿಗಳು, ಹಾಸಿಗೆ ಮತ್ತು ಕರ್ಟನ್ ಗಳು ಇದ್ದವು ಮತ್ತು ಅವುಗಳನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡರು. ಈಗ ಹೇಳುತ್ತೇನೆ ಆ cellar ಕೊಠಡಿಯ ಒಳಗಡೆ ಇದ್ದ ಮಂಚ ಇತ್ಯಾದಿ ವಸ್ತುಗಳನ್ನು ಪೊಲೀಸರು ಶೋಧನೆ ಮಾಡಿದರು, ಆದರೆ ತಮ್ಮ ವಶಕ್ಕೆ ತೆಗೆದುಕೊಂಡಿರುವುದಿಲ್ಲ.

12. ನಂತರ ಆ cellar ನಲ್ಲಿ ಇದ್ದ ಕೊಠಡಿಯಿಂದ ಪೊಲೀಸರು ನನ್ನನ್ನು ಮತ್ತು ಮಂಗಳಲಕ್ಷ್ಮಿ ರವರನ್ನು ಮತ್ತು ಮೇಲೆ ಹೇಳಿದ ರಂಗಸ್ವಾಮಿ ರವರನ್ನು ಕರೆದುಕೊಂಡು ಮತ್ತೆ ಆ ಕಟ್ಟಡದ ಮೊದಲನೇ ಮಹಡಿಯಲ್ಲಿ ಇರುವ ಮನೆಗೆ ಹೋದೆವು. ಆ ಮನೆಯ ವರಾಂಡದಲ್ಲಿ ಇದ್ದ ಸೋಫಾಸೆಟ್, ಚೇರ್ ಗಳು, ಫ್ಯಾನ್ ಮತ್ತು ಕರ್ಟನ್ ಇತ್ಯಾದಿಗಳನ್ನು ಪೊಲೀಸರು ಶೋಧನೆ ಮಾಡಿದರು.

13. ನಂತರ ಪೊಲೀಸ್ ಅಧಿಕಾರಿಗಳು ನಮ್ಮನ್ನು ಕರೆದುಕೊಂಡು ಆ ಮನೆಯಲ್ಲಿ ಇದ್ದ ರಂಗಸ್ವಾಮಿ ರವರ ಮಗನ ಕೊಠಡಿಗೆ ಹೋದೆವು ಮತ್ತು ಅಲ್ಲಿ ಇದ್ದ ಬಟ್ಟೆಗಳು, ಸೋಫಾಸೆಟ್, ಚೇರ್ ಗಳು, ಫ್ಯಾನ್ ಮತ್ತು ಕರ್ಟನ್ ಇತ್ಯಾದಿಗಳನ್ನು ಪೊಲೀಸರು ಶೋಧನೆ ಮಾಡಿದರು.

14. ನಂತರ ಪೊಲೀಸ್ ಅಧಿಕಾರಿಗಳು ನಮ್ಮನ್ನು ಕರೆದುಕೊಂಡು ಆ ಮನೆಯಲ್ಲಿ ಇದ್ದ ರಂಗಸ್ವಾಮಿ ರವರ ಮಗಳ ಕೊಠಡಿಗೆ ಹೋದರು ಮತ್ತು ಅಲ್ಲಿ ಇದ್ದ ಬಟ್ಟೆಗಳು,

ಸೋಫಾಸೆಟ್, ಚೇರ್ ಗಳು, ಫ್ಯಾನ್ ಮತ್ತು ಕರ್ಟನ್ ಇತ್ಯಾದಿಗಳನ್ನು ಪೊಲೀಸರು ಶೋಧನೆ ಮಾಡಿದರು.

15. ನಂತರ ಪೊಲೀಸ್ ಅಧಿಕಾರಿಗಳು ನಮ್ಮನ್ನು ಕರೆದುಕೊಂಡು ಆ ಮನೆಯಲ್ಲಿ ಇದ್ದ ದೇವರ ಕೋಣೆಗೆ ಹೋದರು ಮತ್ತು ಅಲ್ಲಿ ಇದ್ದ ಬೆಳ್ಳಿ ಲೇಪಿತ 1 ಫೋಟೊ, 1 ಬೆಳ್ಳಿ ತಟ್ಟೆ ಮತ್ತು ಬೆಳ್ಳಿಯ ಸಣ್ಣ-ಸಣ್ಣ ದೀಪಗಳನ್ನು ನೋಡಿದರು ಮತ್ತು ಅವುಗಳನ್ನು ರಂಗಸ್ವಾಮಿ ರವರಿಗೆ ವಾಪಸ್ಸು ಕೊಟ್ಟಿದ್ದಾರೆ.

16. ನಂತರ ನನ್ನನ್ನು ಮತ್ತು ಮಂಗಳಲಕ್ಷ್ಮಿ ರವರನ್ನು ಕರೆದುಕೊಂಡು ಆ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಆ ಕಟ್ಟಡದಲ್ಲಿ ಇದ್ದ 2 ನೇ ಮಹಡಿಯಲ್ಲಿ ಇರುವ ಮನೆಗೆ ಕರೆದುಕೊಂಡು ಹೋದರು. ಆ 2 ನೇ ಮಹಡಿಯಲ್ಲಿ ಇದ್ದ ಮನೆಯ ವರಾಂಡದಲ್ಲಿ ಬೆತ್ತದ ಕುರ್ಚಿಗಳು ಮತ್ತು ಕರ್ಟನ್ ಗಳು ಮತ್ತು ಟಿಪಾಯ್ ಮತ್ತು ಫ್ಯಾನ್ ಇದ್ದವು ಅವುಗಳನ್ನು ಪೊಲೀಸರು ಶೋಧನೆ ಮಾಡಿದರು. ಅದೇ ರೀತಿ 2 ನೇ ಮಹಡಿಯಲ್ಲಿ ಇರುವ ಮನೆಯಲ್ಲಿಯೇ ವರಾಂಡದ ಪಕ್ಕದಲ್ಲಿ ಒಂದು guest ರೂಮ್ ಇತ್ತು ಮತ್ತು ಆ ರೂಮಿನಲ್ಲಿ ಮಂಚ, ಕುರ್ಚಿ ಮತ್ತು ಫ್ಯಾನ್ ಇದ್ದವು ಅವುಗಳನ್ನು ಪೊಲೀಸರು ಶೋಧನೆ ಮಾಡಿದರು.

17. ನಂತರ ನನ್ನನ್ನು ಮತ್ತು ಮಂಗಳಲಕ್ಷ್ಮಿ ರವರನ್ನು ಕರೆದುಕೊಂಡು ಆ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಆ ಕಟ್ಟಡದಲ್ಲಿ ಇದ್ದ 2 ನೇ ಮಹಡಿಯಲ್ಲಿ ಇರುವ ಮನೆಯ ಮೇಲಿನ terrace ಗೆ ಕರೆದುಕೊಂಡು ಹೋದರು. ಆ terrace ನಲ್ಲಿ 1 washing machine ಮತ್ತು 1 ಪ್ಲಾಸ್ಟಿಕ್ bucket ಇತ್ತು. ಆ terrace ನಲ್ಲಿ ತಲಾ 500 ಲೀಟರ್ ಸಾಮರ್ಥ್ಯದ 2 ಪ್ಲಾಸ್ಟಿಕ್ ಟ್ಯಾಂಕ್ ಗಳು ಇದ್ದವು.

18. ಮೇಲೆ ಹೇಳಿದ ವಸ್ತುಗಳ ಅಂದರೆ cellar ನಲ್ಲಿ ಲಭ್ಯ ಇದ್ದ ವಸ್ತುಗಳ ಮೌಲ್ಯ ಮತ್ತು ಮೊದಲನೇ ಮಹಡಿಯಲ್ಲಿ ಇದ್ದ ಮನೆಯಲ್ಲಿ ಇದ್ದ ವಸ್ತುಗಳ ಮೌಲ್ಯ ಮತ್ತು ಆ ಕಟ್ಟಡದ 2 ನೇ ಮಹಡಿಯಲ್ಲಿ ಇದ್ದ ಮನೆಯಲ್ಲಿ ಇದ್ದ ವಸ್ತುಗಳ ಮೌಲ್ಯ ಮತ್ತು ಆ terrace ನಲ್ಲಿ ಇದ್ದ ವಸ್ತುಗಳ ಮೌಲ್ಯ ಎಲ್ಲವೂ ಸೇರಿ 6 ಲಕ್ಷದ 81 ಸಾವಿರ ರೂಪಾಯಿಗಳು ಆಗುತ್ತಾ ಇತ್ತು.

19. ಆ ರೀತಿ ಶೋಧನೆ ಮಾಡುತ್ತಾ ಇದ್ದ ಕಾಲದಲ್ಲಿ ಆರೋಪಿ ರಂಗಸ್ವಾಮಿ ರವರ ಬೆಡ್ ರೂಮಿನಲ್ಲಿ ಇರುವ wardrobe ನಲ್ಲಿ 1670/- ಅಥವಾ 1680/- ರೂಪಾಯಿ ಇತ್ತು

ಅದನ್ನು ಸಹಾ ಪೊಲೀಸರು ನೋಡಿದರು ಮತ್ತು ಆರೋಪಿಗೆ ವಾಪಸ್ಸು ಕೊಟ್ಟುಬಿಟ್ಟರು. ಸದರಿ wardrobe ನಲ್ಲಿ ಒಂದು ಜೊತೆ ಚಿನ್ನದ ಓಲೆಗಳು ಮತ್ತು ಚಿಕ್ಕ-ಚಿಕ್ಕ ಬೆಳ್ಳಿಯ ಸಾಮಾನುಗಳು ಮತ್ತು ಆ ಬೆಳ್ಳಿ ಸಾಮಾನುಗಳ ಒಟ್ಟು ತೂಕ ಸುಮಾರು 200 ರಿಂದ 250 ಗ್ರಾಂ ಇತ್ತು. ಸದರಿ HSR layout ನಲ್ಲಿ ಇರುವ ಆಭರಣಗಳ ಅಂಗಡಿಯಿಂದ ಓರ್ವ ಹರೀಶ್ ಎಂಬ ಅಕ್ಕಸಾಲಿಗರನ್ನು ಪೊಲೀಸರು ಕರೆದುಕೊಂಡು ಬಂದು ಆ ಓಲೆ ಮತ್ತು ಬೆಳ್ಳಿ ವಸ್ತುಗಳ ಗುಣಮಟ್ಟ ಮತ್ತು ಮೌಲ್ಯದ ಬಗ್ಗೆ ತೀರ್ಮಾನ ಮಾಡಿಸಿದರು. ಆ ಓಲೆ ಮತ್ತು ಬೆಳ್ಳಿ ವಸ್ತುಗಳನ್ನು ಸಹಾ ಪೊಲೀಸರು ಪರಿಶೀಲನೆ ಮಾಡಿದ ನಂತರ ವಾಪಸ್ಸು ಆರೋಪಿ ರಂಗಸ್ವಾಮಿ ರವರಿಗೆ ಕೊಟ್ಟರು. ಸದರಿ wardrobe ನಲ್ಲಿಯೇ 3-4 file ಗಳು ಇದ್ದವು ಮತ್ತು ಅವುಗಳಲ್ಲಿ ಕೆಲವು ದಾಖಲೆಗಳು ಇದ್ದವು. ಸದರಿ ದಾಖಲಾತಿಗಳನ್ನು ಪೊಲೀಸರು ಪರಿಶೀಲನೆ ಮಾಡಿದರು ಮತ್ತು ತಮ್ಮ ವಶಕ್ಕೆ ತೆಗೆದುಕೊಂಡರು. ಆ ರೀತಿ ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡ ದಾಖಲಾತಿಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ. ಆ ದಾಖಲೆಗಳಲ್ಲಿ ನನ್ನ ಸಹಿ ಇದೆ. ಪಾಸ್ ಪುಸ್ತಕಗಳನ್ನು ನಿಪಿ**-4, 5, 6, 7, 8, 9, 10, 11, 12, 13** ಮತ್ತು **14** ಎಂದು ಗುರುತಿಸಿದೆ. ಈ ದಾಖಲೆಗಳಲ್ಲಿ ಇರುವ ಈ ಸಾಕ್ಷಿದಾರರ ಸಹಿಗಳನ್ನು ನಿಪಿ**-4(ಎ), 5(ಎ), 6(ಎ), 7(ಎ), 8(ಎ), 9(ಎ), 10(ಎ), 11(ಎ), 12(ಎ), 13(ಎ)** ಮತ್ತು **14(ಎ)** ಎಂದು ಗುರುತಿಸಿದೆ.

20. ಇದರ ಜೊತೆಗೆ ಆರೋಪಿಯ ಮನೆಯಿಂದ ಮತ್ತೆ ಕೆಲವು ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಸದರಿ ದಾಖಲೆಗಳನ್ನು ನಿಪಿ**-15, 16, 17, 18, 19, 20, 21, 22, 23, 24, 25, 26, 27, 28, 29, 30, 31, 32, 33, 34, 35** ಮತ್ತು **36** ಎಂದು ಗುರುತಿಸಿದೆ ಮತ್ತು ಈ ಸಾಕ್ಷಿದಾರರ ಸಹಿಗಳನ್ನು ಕ್ರಮವಾಗಿ ನಿಪಿ**-15(ಎ), 16(ಎ), 17(ಎ), 18(ಎ), 19(ಎ), 20(ಎ), 21(ಎ), 22(ಎ), 23(ಎ), 24(ಎ), 25(ಎ), 26(ಎ), 27(ಎ), 28(ಎ), 29(ಎ), 30(ಎ), 31(ಎ), 32(ಎ), 33(ಎ), 34(ಎ),** ನಿಪಿ**-35(ಎ)** ಮತ್ತು **36(ಎ)** ಎಂದು ಗುರುತಿಸಿದೆ.

21. ಆರೋಪಿ ರಂಗಸ್ವಾಮಿ ರವರು ಮತ್ತು ಅವರ ಧರ್ಮಪತ್ನಿಯಾದ ಇಂದಿರಾ ರವರ ಹೆಸರಿನಲ್ಲಿ ಸಲ್ಲಿಸಿರುವ ಆದಾಯ ತೆರಿಗೆ returns ಬಗ್ಗೆ ಇರುವ ದಾಖಲೆಯನ್ನು ಒಟ್ಟಾಗಿ ನಿಪಿ**-37** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು ನಿಪಿ**-37(ಎ)** ಎಂದು ಗುರುತಿಸಿದೆ.

22. ಅದೇ ರೀತಿ ಆ ಶೋಧನಾ ಸಮಯದಲ್ಲಿ ಆರೋಪಿ ರಂಗಸ್ವಾಮಿ ರವರ ಹೆಸರಿನಲ್ಲಿ

ಇದ್ದ ಪಂಚಾಯಿತಿ ಪಾರಿಕತ್ ಮತ್ತು ಪಾಲಿಸಿಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಸದರಿ ದಾಖಲೆಗಳನ್ನು ನಿಪಿ**-38, 39, 40, 41, 42, 43, 44, 45, 46, 47, 48, 49, 50, 51, 52, 53, 54, 55, 56, 57, 58, 59, 60, 61, 62, 63, 64, 65, 66, 67, 68, 69** ಮತ್ತು **70** ಎಂದು ಗುರುತಿಸಿದೆ ಮತ್ತು ಈ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ**-38(ಎ), 39(ಎ), 40(ಎ), 41(ಎ), 42(ಎ), 43(ಎ), 44(ಎ), 45(ಎ), 46(ಎ), 47(ಎ), 48(ಎ), 49(ಎ), 50(ಎ), 51(ಎ), 52(ಎ), 53(ಎ), 54(ಎ), 55(ಎ), 56(ಎ), 57(ಎ), 58(ಎ), 59(ಎ), 60(ಎ), 61(ಎ), 62(ಎ), 63(ಎ), 64(ಎ), 65(ಎ), 66(ಎ), 67(ಎ), 68(ಎ), 69(ಎ)** ಮತ್ತು **70(ಎ)** ಎಂದು ಗುರುತಿಸಿದೆ.

23. ಆರೋಪಿಯು ತಮ್ಮ ಇಲಾಖೆಗೆ 1992, 1993, 1994 ಮತ್ತು 1995 ಇಸವಿಗಳಲ್ಲಿ ಸಲ್ಲಿಸಿರುವ Assets and Liabilities ಬಗ್ಗೆ ಇರುವ ದಾಖಲೆಗಳನ್ನು ನಿಪಿ**-71, 72, 73** ಮತ್ತು **74** ಎಂದು ಗುರುತಿಸಿದೆ. ಆರೋಪಿಯ ಹೆಸರಿನಲ್ಲಿ ಇರುವ ದಾಖಲೆಗಳನ್ನು ನಿಪಿ**-75, 76, 77, 78, 79, 80, 81, 82, 83, 84, 85, 86, 87, 88, 89, 90, 91, 92, 93, 94, 95, 96, 97, 98** ಮತ್ತು **99** ಎಂದು ಗುರುತಿಸಿದೆ ಮತ್ತು ಈ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ**-71(ಎ), 72(ಎ), 73(ಎ)** ಮತ್ತು **74(ಎ)**, ನಿಪಿ**-75(ಎ), 76(ಎ), 77(ಎ), 78(ಎ), 79(ಎ), 80(ಎ), 81(ಎ), 82(ಎ), 83(ಎ), 84(ಎ), 85(ಎ), 86(ಎ), 87(ಎ), 88(ಎ), 89(ಎ), 90(ಎ), 91(ಎ), 92(ಎ), 93(ಎ), 94(ಎ), 95(ಎ) 96(ಎ), 97(ಎ), 98(ಎ)** ಮತ್ತು **99(ಎ)** ಎಂದು ಗುರುತಿಸಿದೆ.

24. ಮೇಲೆ ಹೇಳಿದ ಎಲ್ಲಾ ಕಾರ್ಯಗಳನ್ನು ಮತ್ತು ಶೋಧನೆಯನ್ನು ಮಾಡಿದ ನಂತರ ಪೊಲೀಸರು ನನ್ನನ್ನು ಮತ್ತು ಮಂಗಳಲಕ್ಷ್ಮಿ ರವರನ್ನು ಕರೆದುಕೊಂಡು ಆ ಕಟ್ಟಡದ cellar ಗೆ ಬಂದರು.

25. ಆರೋಪಿಯ ಮನೆಯಲ್ಲಿ ಕೆಲಸ ಮಾಡುತ್ತಾ ಇದ್ದ ಕೆಲಸಗಾರರಿಗೆ ಆ ಕಟ್ಟಡದ cellar ನಲ್ಲಿ ಒಂದು ಚಿಕ್ಕಮನೆಯನ್ನು ಮಾಡಿಕೊಡಲಾಗಿತ್ತು ಮತ್ತು ಆ ಮನೆಯಲ್ಲಿ 2 Godrej ಬೀರುಗಳು ಇದ್ದವು. ಆ 2 Godrej ಬೀರುಗಳ ಪೈಕಿ ಒಂದನ್ನು ತೆಗೆದು ನೋಡಿದಾಗ ಅದರಲ್ಲಿ ಆರೋಪಿಯ ಸಮವಸ್ತ್ರ ಮತ್ತು ಟೋಪಿ ಇದ್ದವು. ಆದರೆ ಮತ್ತೊಂದು ಬೀರುವನ್ನು open ಮಾಡಲು ಆಗಲಿಲ್ಲ.

26. ನಂತರ ಬೆಳಿಗ್ಗೆ 10.30 ಗಂಟೆಯಿಂದ ಸಂಜೆ 4.30 ಗಂಟೆವರೆಗೆ ಪೊಲೀಸರು ಅಲ್ಲಿ ಮಹಜರ್ ಅನ್ನು ಬರೆದರು. ಸದರಿ ಮಹಜರ್ ಕಾಲದಲ್ಲಿ ನಾನು ಸ್ಥಳದಲ್ಲಿ ಹಾಜರಿದ್ದೆನು ಮತ್ತು ಆ ಮಹಜರ್ ಗೆ ನನ್ನ ಸಹಿಯನ್ನು ಮಾಡಿದ್ದೇನೆ. ಸದರಿ ಮಹಜರ್ ಅನ್ನು **ನಿಪಿ-100** ಎಂದು ಗುರುತಿಸಿದೆ.

<u>ಸೂಚನೆ:</u> ಈ ಮಹಜರ್ ಒಟ್ಟು 17 ಪುಟಗಳನ್ನು ಒಳಗೊಂಡಿದೆ ಮತ್ತು ಪ್ರತಿ ಪುಟದಲ್ಲಿಯು ಈ ಸಾಕ್ಷಿದಾರರ ಸಹಿ ಇದೆ. ಆದರೆ ಮೊದಲನೇ ಪುಟ ಮತ್ತು ಕಡೆಯ ಪುಟದಲ್ಲಿ ಇರುವ ಸಹಿಗಳನ್ನು ಮಾತ್ರ **ನಿಪಿ-100(ಎ)** ಮತ್ತು **ನಿಪಿ-100(ಬಿ)** ಎಂದು ಗುರುತಿಸಿದೆ.

27. ನಂತರ ಆರೋಪಿಯ ಧರ್ಮಪತ್ನಿಯಾದ ಶ್ರೀಮತಿ ಇಂದಿರಾ ರವರನ್ನು ಕರೆದುಕೊಂಡು ಬೆಂಗಳೂರು ನಗರದ HSR layout ನಲ್ಲಿಯೇ ಇರುವ State Bank of Mysuru ಗೆ ಪೊಲೀಸ್ ನವರು ಮತ್ತು ನಾವು ಹೋದೆವು. ನಂತರ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಬ್ಯಾಂಕಿನ ಮ್ಯಾನೇಜರ್ ರವರಿಗೆ ಒಂದು ಕೋರಿಕೆಪತ್ರವನ್ನು ಕೊಟ್ಟರು ಮತ್ತು ಆ ಮೂಲಕ ಆರೋಪಿಯ ಹೆಂಡತಿಯ ಹೆಸರಿನಲ್ಲಿ ಇರುವ ಲಾಕರ್ ಅನ್ನು ತೆರೆಯಲು ಅನುಮತಿ ಕೋರಿದರು. ಆ ಲಾಕರ್ ನ ಸಂಖ್ಯೆ 25B ಆಗಿತ್ತು. ಆ ಲಾಕರ್ ಅನ್ನು ಬ್ಯಾಂಕಿನ ಅಧಿಕಾರಿಗಳು ನಮ್ಮ ಸಮಕ್ಷಮದಲ್ಲಿ open ಮಾಡಿದರು ಮತ್ತು ಆ ಲಾಕರ್ ನ ಒಳಗಡೆ ಒಟ್ಟು 26 ಚಿನ್ನದ ಆಭರಣಗಳು ಇದ್ದವು. ಆ ಆಭರಣಗಳನ್ನು ಮೇಲೆ ಹೇಳಿದ ಅಕ್ಕಸಾಲಿಗನು ಪರಿಶೀಲನೆ ಮಾಡಿ ನಂತರ ತೂಕ ಮಾಡಿದರು ಮತ್ತು ಅಂದಾಜು ಮೌಲ್ಯವನ್ನು ಸಹಾ ಹೇಳಿದರು. ಆ ಲಾಕರ್ ನಲ್ಲಿ ಇದ್ದ ಒಡವೆಗಳ ಒಟ್ಟು ತೂಕ 588.1 ಗ್ರಾಂ ಇತ್ತು ಮತ್ತು ಅವುಗಳ ಮೌಲ್ಯ 9,87,500/- ರೂಪಾಯಿಗಳು ಆಗುತ್ತದೆ ಎಂಬುದಾಗಿ ಆ ಅಕ್ಕಸಾಲಿಗರು ಅಂದಾಜು ಮಾಡಿದರು. ಆ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ಆ ಆಭರಣಗಳನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡರು ಮತ್ತು ಆ ಸಂಬಂಧ ಒಂದು ಮಹಜರ್ ಅನ್ನು ಬರೆದರು. ಆ ಬಗ್ಗೆ ಇರುವ ಮಹಜರ್ ಅನ್ನು **ನಿಪಿ-101** ಎಂದು ಮತ್ತು ಈ ಸಾಕ್ಷಿಯ ಸಹಿಗಳನ್ನು **ನಿಪಿ-101(ಎ), ನಿಪಿ-101(ಬಿ), ನಿಪಿ-101(ಸಿ)** ಮತ್ತು **ನಿಪಿ-101(ಡಿ)** ಎಂದು ಗುರುತಿಸಿದೆ.

28. ಈಗ ನನಗೆ ತೋರಿಸಿದ ಒಡವೆಗಳನ್ನು ಆ ದಿನ ಪೊಲೀಸರು ಬ್ಯಾಂಕಿನ ಲಾಕರ್ ನಿಂದ ತೆಗೆದು ವಶಪಡಿಸಿಕೊಂಡಿರುವ ಒಡವೆಗಳು ಆಗಿವೆ. ಆ ಒಡವೆಗಳಿಗೆ ಈ ಕೆಳಕಂಡಂತೆ ನಂಬರ್ ಗಳನ್ನು ನೀಡಲಾಗಿದೆ.

1) ಒಂದು ಮುತ್ತಿನ ಸರ ಅದಕ್ಕೆ ಹೊಂದಿಕೊಂಡಂತೆ ಪೆಂಡೆಂಟ್ ಮತ್ತು ಕಿವಿ ಓಲೆ (ಹಸಿರು ಬಣ್ಣದ ಕಲ್ಲುಗಳು) - ಮು.ಮಾ-**1**,

2) ಒಂದು ಚಿನ್ನದ ನೆಕ್ಲೆಸ್ - ಮು.ಮಾ-**2**,

3) ಒಂದು ಕೆಂಪು ಮತ್ತು ನೀಲಿ ಕಲ್ಲುಗಳಿರುವ ಚಿನ್ನದ ನೆಕ್ಲೆಸ್ ಹಾಗೂ ಅದಕ್ಕೆ ಹೊಂದಿಕೊಂಡಂತೆ ಒಂದು ಜೊತೆ ಓಲೆ - ಮು.ಮಾ-**3**,

4) ಕಪ್ಪುದಾರಕ್ಕೆ ಅಳವಡಿಸಿರುವ ಒಂದು ಕೆಂಪು ಹವಳಗಳುಳ್ಳ ಜೋಮಾಲೆ ಸರ (9 ಚಿನ್ನದ ಗುಂಡುಗಳು) - ಮು.ಮಾ-**4**,

5) ಒಂದು ಹಸಿರು ಬಣ್ಣದ ಕಲ್ಲು ಹೊಂದಿರುವ ಚಿನ್ನದ ನೆಕ್ಲೆಸ್ - ಮು.ಮಾ-**5**,

6) ಒಂದು ಗೋಲ್ಡ್ ಪೆಂಡೆಂಟ್ ಹಾಗೂ ಗೋಲ್ಡ್ ಪೀಸ್ ಗಳು ಇರುವ ಒಂದು ಮುತ್ತಿನ ಹಾರ - ಮು.ಮಾ-**6**,

7) ಒಂದು ಜೇಡ ಸರ ಮತ್ತು ಅದಕ್ಕೆ ಹೊಂದಿಕೊಂಡಂತೆ ಕೊಕ್ಕೆ ತಾತಿ - ಮು.ಮಾ-**7**,

8) ಒಂದು ಬಿಳಿ ಮುತ್ತಿನ ಸರ ಮತ್ತು ಅದಕ್ಕೆ ಹೊಂದಿಕೊಂಡಂತೆ 5 ಚಿನ್ನದ ಗುಂಡುಗಳು ಇರುತ್ತವೆ (ಚಿನ್ನದ ಗುಂಡುಗಳು) - ಮು.ಮಾ-**8**,

9) ಒಂದು ಚಿನ್ನದ ನಕ್ಲೆಸ್ - ಮು.ಮಾ-**9**,

10) ಒಂದು ಚಿನ್ನದ ಪೆಂಡೆಂಟ್ ಇರುವ ಮುತ್ತಿನ ಸರ - ಮು.ಮಾ-**10**,

11) ಒಂದು ಚಿನ್ನದ ಚಿಕ್ಕ ನೆಕ್ಲೆಸ್ - ಮು.ಮಾ-**11**,

12) ಒಂದು ಜೊತೆ ಚಿನ್ನ ಬಳೆಗಳು(ಹಸಿರು ಬಣ್ಣದ ಕಲ್ಲುಗಳು ಇರುತ್ತವೆ)- ಮು.ಮಾ-**12**,

13) ಒಂದು ಜೊತೆ ಬಿಳಿ ಮುತ್ತನ್ನು ಒಳಗೊಂಡ ಚಿನ್ನದ ಬಳೆಗಳು - ಮು.ಮಾ-**13**,

14) ಒಂದು ಜೊತೆ ಬಿಳಿ ಕಲ್ಲು ಗಳಿರುವ ಚಿನ್ನದ ಬಳೆಗಳು - ಮು.ಮಾ-**14**,

15) ಒಂದು ಹಸಿರು ಮಣಿಯುಳ್ಳ ಚಿನ್ನದ ಕಡಗ, ಒಂದು ಕಪ್ಪುಮಣಿ ಇರುವ ಚಿನ್ನದ ಕಡಗ, ಒಂದು ಕೆಂಪು ಹರಳುಗಳಿರುವ ಚಿನ್ನದ ಕಡಗ - ಒಟ್ಟಾಗಿ ಮು.ಮಾ-**15**,

16) ಒಂದು ಕೆಂಪು ಹವಳಗಳಿರುವ ಹಳೆಯ ಎರಡೆಳೆಯ ಚಿನ್ನದ ಸರ - ಮು.ಮಾ-**16**,

17) ಒಂದು ಕೆಂಪು ಹರಳಿನ ಚಿನ್ನದ ಪದಕ - ಮು.ಮಾ-**17**,

18) ಒಂದು ಚಿನ್ನದ ಪೆಂಡೆಂಟ್ - ಮು.ಮಾ-**18**,

19) ಒಂದು ಚಿನ್ನದ ಸೀರೆ ಪಿನ್ - ಮು.ಮಾ-**19**,

20) 8 ಚಿನ್ನದ ಉಂಗುರಗಳು (6 ಉಂಗುರಗಳಿಗೆ ಕಲ್ಲುಗಳಿದ್ದು, 2 ಸಾದಾ ಉಂಗುರಗಳು ಇರುತ್ತವೆ) - ಅವುಗಳನ್ನು ಒಟ್ಟಾಗಿ - ಮು.ಮಾ-**20**,

21) ಒಂದು ಜೊತೆ ಬಿಳಿ ಕಲ್ಲುಗಳಿರುವ ಕಿವಿ ಓಲೆ - ಮು.ಮಾ-**21**,

22) ಒಂದು ಜೊತೆ ಮುತ್ತಿನ ಹ್ಯಾಂಗಿಂಗ್ಸ್ - ಮು.ಮಾ-**22**,

23) ಒಂದು ಜೊತೆ ಕೆಂಪು ಹವಳದ ಕಿವಿ ಓಲೆ - ಮು.ಮಾ-**23**,

24) ಒಂದು ಜೊತೆ ಕೆಂಪು ಕಲ್ಲು ಇರುವ ಕಿವಿ ಓಲೆ - ಮು.ಮಾ-**24**,

25) ಒಂದು ಜೊತೆ ಕೆಂಪು ಹರಳುಗಳುಳ್ಳ ಕಿವಿ ಓಲೆ - ಮು.ಮಾ-**25**,

26) 19 ಜೊತೆ ಚಿನ್ನದ ವಿವಿಧ ರೀತಿಯ ಹಳೆಯ ಕಿವಿ ಓಲೆಗಳು (ಅವುಗಳಿಗೆ ವಿವಿಧ ಬಣ್ಣದ ಮುತ್ತು, ಕಲ್ಲು ಮತ್ತು ಮಣಿಗಳನ್ನು ಅಳವಡಿಸಲಾಗಿದೆ) ಮತ್ತು 1 ಲಕ್ಷ್ಮಿ ಕಾಸು - ಇವುಗಳನ್ನು ಒಟ್ಟಾಗಿ - ಮು.ಮಾ-**26**.

**ಮೇಲೆ ಹೇಳಿದ ವಸ್ತುಗಳಿಗೆ ಅವುಗಳ ಎದುರಿನಲ್ಲಿ ನಮೂದಿಸಿರುವ ಮು.ಮಾಲು ಸಂಖ್ಯೆಗಳನ್ನು ನೀಡಲಾಗಿದೆ.**

29. ಅದೇ ರೀತಿ ಮೇಲೆ ಹೇಳಿದ ಬ್ಯಾಂಕಿನಲ್ಲಿ ಲಾಕರ್ ಗಳನ್ನು ಹೊಂದಿರುವ ವ್ಯಕ್ತಿಗಳ ವಿವರಗಳನ್ನು ಒಳಗೊಂಡಿರುವ ಒಂದು register ಇತ್ತು, ಆ register ನ ಸಂಬಂಧಪಟ್ಟ entry ಯ ದೃಢೀಕೃತ ನಕಲನ್ನು ಬ್ಯಾಂಕಿನ ಅಧಿಕಾರಿಗಳಿಂದ ಪೊಲೀಸ್ ಅಧಿಕಾರಿಗಳು ಪಡೆದುಕೊಂಡಿದ್ದಾರೆ. ಸದರಿ ದಾಖಲೆಯನ್ನು **ನಿಪಿ-102** ಎಂದು ಗುರುತಿಸಿದೆ. ನಿಪಿ-102 ದಾಖಲೆಯಲ್ಲಿ ಕೆ.ಎ ಇಂದಿರಾ ರವರಿಗೆ ಸಂಬಂಧಪಟ್ಟ ವಿವರ ಇದೆ. ಆ ಭಾಗಾಂಶವನ್ನು **ನಿಪಿ-102(ಎ)** ಎಂಬುದಾಗಿ ಗುರುತಿಸಲಾಯಿತು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-102(ಬಿ)** ಎಂದು ಗುರುತಿಸಿದೆ.

**<u>ಪಾಟೀಸವಾಲು- ಆರೋಪಿ ಪರವಾಗಿ ಶ್ರೀ ಎಂ.ಎನ್.ಎಸ್, ವಕೀಲರಿಂದ:</u>**

**ಮಾನ್ಯ ವಕೀಲರು ಹಾಜರಿದ್ದಾರೆ ಮತ್ತು ಸಮಯ ಕೋರಿದ್ದಾರೆ ಮತ್ತು ಈಗಾಗಲೇ ಸಂಜೆ 4.25 ಆಗಿರುವ ಕಾರಣದಿಂದ ಪಾಟೀಸವಾಲನ್ನು ಮುಂದೂಡಿದೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ

**ಸಾಕ್ಷಿಯನ್ನು ದಿನಾಂಕ 30.09.2022 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಸೂಚನೆ:** ಮಾನ್ಯ ವಿಶೇಷ ಅಭಿಯೋಜಕರು ಹಾಜರಿದ್ದಾರೆ ಮತ್ತು "ಕಳೆದ ಬಾರಿ ಈ ಸಾಕ್ಷಿದಾರರ ಮುಖ್ಯವಿಚಾರಣೆಯನ್ನು ಮಾಡುವ ಸಂದರ್ಭದಲ್ಲಿ ಕಣ್ತಪ್ಪಿನಿಂದ ಕೆಲವು ದಾಖಲೆಗಳನ್ನು ನಿಶಾನೆಯನ್ನಾಗಿ ಗುರುತಿಸುವುದು ಬಿಟ್ಟುಹೋಗಿದೆ ಮತ್ತು ಆ ಕಾರಣದಿಂದ ಈ ಸಾಕ್ಷಿದಾರರ ಮುಂದುವರೆದ ಮುಖ್ಯವಿಚಾರಣೆಯನ್ನು ಮಾಡಲು ಅನುಮತಿ ನೀಡಬೇಕು" ಎಂದು ಪ್ರಾರ್ಥಿಸಿದ್ದಾರೆ ಮತ್ತು ಇದಕ್ಕೆ ಪ್ರತಿಯಾಗಿ ಮಾನ್ಯ ಪಿ.ಕೆ.ಎಸ್ ವಕೀಲರು ಹಾಜರಿದ್ದಾರೆ ಮತ್ತು ಈ ಸಾಕ್ಷಿದಾರರ ಮುಂದುವರೆದ ಮುಖ್ಯವಿಚಾರಣೆ ಮಾಡಲು ತಮ್ಮ ತಕರಾರು ಇರುವುದಿಲ್ಲ ಎಂಬುದಾಗಿ ನುಡಿದಿದ್ದಾರೆ. ಆದ್ದರಿಂದ ಈ ಸಾಕ್ಷಿದಾರರ ಮುಂದುವರೆದ ಮುಖ್ಯವಿಚಾರರಣೆಯನ್ನು ಮಾಡಿಕೊಳ್ಳಲಾಯಿತು.

**ಮುಂದುವರೆದ ಮುಖ್ಯವಿಚಾರಣೆ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ:**

30. ಬೆಂಗಳೂರಿನ HSR layout ನಲ್ಲಿ ಇರುವ ಆರೋಪಿಗೆ ಸೇರಿದ ಮನೆಯ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಕೆಲವು ದಾಖಲೆಗಳನ್ನು ಸಹಾ ವಶಪಡಿಸಿಕೊಳ್ಳಲಾಯಿತು.

31. ಖಾತಾ ನಂ. 1072 ಆಸ್ತಿಗೆ ಸಂಬಂಧಿಸಿದಂತೆ ತೆರಿಗೆ ಪಾವತಿ ಮಾಡಿರುವ ಬಗ್ಗೆ ಇರುವ ದಾಖಲೆಯನ್ನು **ನಿಪಿ-103** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-103(ಎ)** ಎಂದು ಗುರುತಿಸಿದೆ. ಅದೇ ರೀತಿ 2011-2012 ಸಾಲಿನಲ್ಲಿ ಆಸ್ತಿ ಸಂಖ್ಯೆ 1072 ಆಸ್ತಿಗೆ ತೆರಿಗೆ ಕಟ್ಟಿರುವ ಬಗ್ಗೆ ಇರುವ ದಾಖಲೆಯನ್ನು **ನಿಪಿ-104** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-104(ಎ)** ಎಂದು ಮತ್ತು 2010-2011 ಸಾಲಿಗೆ ಅದೇ ಆಸ್ತಿಗೆ ಅಂದರೆ ಆಸ್ತಿ ಸಂಖ್ಯೆ 1072 ಆಸ್ತಿಗೆ ತೆರಿಗೆ ಕಟ್ಟಿರುವ ಬಗ್ಗೆ ಇರುವ ದಾಖಲೆಯನ್ನು **ನಿಪಿ-105** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-105(ಎ)** ಎಂಬುದಾಗಿ ಗುರುತಿಸಿದೆ.

32. ದಿನಾಂಕ 02.03.2009 ರಂದು ಆಸ್ತಿ ಸಂಖ್ಯೆ 1072 ಆಸ್ತಿಗೆ ತೆರಿಗೆ ಕಟ್ಟಿರುವ ಬಗ್ಗೆ ಇರುವ ರಶೀದಿಗಳನ್ನು **ನಿಪಿ-106** ಎಂದು ಮತ್ತು **ನಿಪಿ-107** ಎಂದು ಮತ್ತು ಈ ಸಾಕ್ಷಿಯ ಸಹಿಗಳನ್ನು **ನಿಪಿ-106(ಎ)** ಮತ್ತು **ನಿಪಿ-107(ಎ)** ಎಂಬುದಾಗಿ ಗುರುತಿಸಿದೆ. ಅದೇ ರೀತಿ ಅದೇ ಆಸ್ತಿಗೆ ದಿನಾಂಕ 30.08.2009 ರಂದು ತೆರಿಗೆ ಕಟ್ಟಿರುವ ಬಗ್ಗೆ ಇರುವ ರಶೀದಿಯನ್ನು **ನಿಪಿ-108** ಮತ್ತು ಸಹಿಯನ್ನು **ನಿಪಿ-108(ಎ)** ಎಂಬುದಾಗಿ ಗುರುತಿಸಿದೆ.

33. ದಿನಾಂಕ 13.06.2009 ರಂದು ಬೆಂಗಳೂರಿನ ಸಹಾಯಕ ಕಂದಾಯ ಅಧಿಕಾರಿಯವರು ನೀಡಿರುವ ಆಸ್ತಿ ತೆರಿಗೆ ಘೋಷಣೆ ಸಲ್ಲಿಸದೇ ಇರುವ ಬಗ್ಗೆ ಸೂಚನಾ

ಪತ್ರವನ್ನು ನಿಪಿ-**109** ಮತ್ತು ಈ ಸಾಕ್ಷಿಯ ಸಹಿಯನ್ನು ನಿಪಿ-**109(ಎ)** ಎಂದು ಮತ್ತು ದಿನಾಂಕ 26.06.2009 ರಂದು ಅದೇ ಆಸ್ತಿಗೆ ತೆರಿಗೆ ಕಟ್ಟಿರುವ ರಶೀದಿಯನ್ನು ನಿಪಿ-**110** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು ನಿಪಿ-**110(ಎ)** ಎಂಬುದಾಗಿ ಗುರುತಿಸಿದೆ. ದಿನಾಂಕ 26.06.2009 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯವರು ನೀಡಿರುವ ಪ್ರಮಾಣಪತ್ರವನ್ನು ನಿಪಿ-**111** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು ನಿಪಿ-**111(ಎ)** ಎಂಬುದಾಗಿ ಗುರುತಿಸಿದೆ.

34. ಅದೇ ರೀತಿ ಸದರಿ ಆಸ್ತಿ ಸಂಖ್ಯೆ 1072 ಆಸ್ತಿಗೆ ಸಂಬಂಧಪಟ್ಟ ಬೇರೆ ಬೇರೆ ವರ್ಷಗಳಿಗೆ ಮತ್ತು ದಿನಾಂಕಗಳಿಗೆ ಸಂಬಂಧಿಸಿದ ಇತರೆ ರಶೀದಿಗಳನ್ನು ಕ್ರಮವಾಗಿ ನಿಪಿ-**112,** ನಿಪಿ-**113,** ನಿಪಿ-**114,** ನಿಪಿ-**115,** ನಿಪಿ-**116** ಮತ್ತು ನಿಪಿ-**117** ಎಂದು ಮತ್ತು ಈ ಸಾಕ್ಷಿದಾರರ ಸಹಿಗಳನ್ನು ಕ್ರಮವಾಗಿ ನಿಪಿ-**112(ಎ),** ನಿಪಿ-**113(ಎ),** ನಿಪಿ-**114(ಎ),** ನಿಪಿ-**115(ಎ),** ನಿಪಿ-**116(ಎ)** ಮತ್ತು ನಿಪಿ-**117(ಎ)** ಎಂದು ಗುರುತಿಸಿದೆ. ಅದೇ ರೀತಿ ಇದೇ ಆಸ್ತಿಗೆ ಸಂಬಂಧಿಸಿದ ಇತರೆ ಕಂದಾಯ ರಶೀದಿಗಳನ್ನು ನಿಪಿ-**118,** ನಿಪಿ-**119,** ನಿಪಿ-**120,** ನಿಪಿ-**121** ಮತ್ತು ನಿಪಿ-**122** ಎಂಬುದಾಗಿ ಮತ್ತು ಈ ದಾಖಲೆಗಳಲ್ಲಿ ಇರುವ ಈ ಸಾಕ್ಷಿದಾರರ ಸಹಿಗಳನ್ನು ಕ್ರಮವಾಗಿ ನಿಪಿ-**118(ಎ),** ನಿಪಿ-**119(ಎ), 120(ಎ),** ನಿಪಿ-**121(ಎ)** ಮತ್ತು ನಿಪಿ-**122(ಎ)** ಎಂದು ಗುರುತಿಸಿದೆ.

35. ವಿದ್ಯುಚ್ಛಕ್ತಿ ಉಪಯೋಗಿಸಿದ ಬಗ್ಗೆ ಹಣ ಪಾವತಿ ಮಾಡಿರುವ ಬಗ್ಗೆ ಇರುವ ರಶೀದಿಗಳನ್ನು ನಿಪಿ-**123,** ನಿಪಿ-**124** ಮತ್ತು ನಿಪಿ-**125** ಎಂದು ಮತ್ತು ಆ ರಶೀದಿಗಳಲ್ಲಿ ಇರುವ ಈ ಸಾಕ್ಷಿದಾರರ ಸಹಿಗಳನ್ನು ಕ್ರಮವಾಗಿ ನಿಪಿ-**123(ಎ),** ನಿಪಿ-**124(ಎ)** ಮತ್ತು ನಿಪಿ-**125(ಎ)** ಎಂದು ಗುರುತಿಸಿದೆ. ಒಂದು ಕಟ್ಟಡದ ನಕಾಶೆ (building plan) ಅನ್ನು ನಿಪಿ-**126** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು ನಿಪಿ-**126(ಎ)** ಎಂಬುದಾಗಿ ಗುರುತಿಸಿದೆ.

36. ವಿದ್ಯುಚ್ಛಕ್ತಿ ತೆರಿಗೆ ಪಾವತಿ ಬಗ್ಗೆ ಇರುವ ಮತ್ತೊಂದು ರಶೀದಿಯನ್ನು ನಿಪಿ-**127** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು ನಿಪಿ-**127(ಎ)** ಎಂದು ಗುರುತಿಸಿದೆ.

37. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನೀಡಿರುವ ನಕ್ಷೆ ಮಂಜೂರಾತಿ ಪತ್ರವನ್ನು ನಿಪಿ-**128** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು ನಿಪಿ-**128(ಎ)** ಎಂದು ಗುರುತಿಸಿದೆ.

38. ಅದೇ ರೀತಿ ಆಸ್ತಿ ಸಂಖ್ಯೆ 1072 ಆಸ್ತಿಗೆ ಸಂಬಂಧಿಸಿದ ಮತ್ತೆ ಎರಡು ಆಸ್ತಿ ತೆರಿಗೆ ಚಲನ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು **ನಿಪಿ-129** ಮತ್ತು **ನಿಪಿ-130** ಎಂದು ಗುರುತಿಸಿದೆ ಮತ್ತು ಆ ಚಲನ್ ಗಳಲ್ಲಿ ಇರುವ ಈ ಸಾಕ್ಷಿಯ ಸಹಿಗಳನ್ನು **ನಿಪಿ-129(ಎ)** ಮತ್ತು **ನಿಪಿ-130(ಎ)** ಎಂದು ಗುರುತಿಸಿದೆ.

39. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನೀಡಿರುವ ಹಂಚಿಕೆಪತ್ರವನ್ನು ನಿಪಿ-**131** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-131(ಎ)** ಎಂದು ಗುರುತಿಸಿದೆ. ಆಸ್ತಿ ಸಂಖ್ಯೆ 1072 ಆಸ್ತಿಗೆ ಸಂಬಂಧಿಸಿದ ಋಣಭಾರ ರಾಹಿತ್ಯ ಪತ್ರವನ್ನು **ನಿಪಿ-132** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-132(ಎ)** ಎಂದು ಗುರುತಿಸಿದೆ.

40. ಆಸ್ತಿ ಸಂಖ್ಯೆ 1072 ಆಸ್ತಿಗೆ ಸಂಬಂಧಿಸಿದ ಮತ್ತೆ ಕೆಲವು ತೆರಿಗೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು **ನಿಪಿ-133, ನಿಪಿ-134, ನಿಪಿ-135, ನಿಪಿ-136, ನಿಪಿ-137, ನಿಪಿ-138, ನಿಪಿ-139, ನಿಪಿ-140** ಎಂದು ಮತ್ತು ಆ ರಶೀದಿಗಳಲ್ಲಿ ಇರುವ ಈ ಸಾಕ್ಷಿದಾರರ ಸಹಿಗಳನ್ನು ಕ್ರಮವಾಗಿ **ನಿಪಿ-133(ಎ), ನಿಪಿ-134(ಎ), ನಿಪಿ-135(ಎ), ನಿಪಿ-136(ಎ), ನಿಪಿ-137(ಎ), ನಿಪಿ-138(ಎ), ನಿಪಿ-139(ಎ)** ಮತ್ತು **ನಿಪಿ-140(ಎ)** ಎಂಬುದಾಗಿ ಗುರುತಿಸಿದೆ.

41. ಋಣಭಾರ ರಾಹಿತ್ಯಪತ್ರವನ್ನು ಅಂದರೆ ನಿಪಿ-132 ಎಂದು ಗುರುತು ಆಗಿರುವ ದಾಖಲೆಯನ್ನು ಪಡೆದುಕೊಳ್ಳುವ ಸಂಬಂಧ ಶುಲ್ಕ ಕಟ್ಟಿರುವ ಬಗ್ಗೆ ಇರುವ ರಶೀದಿಯನ್ನು **ನಿಪಿ-141** ಎಂದು ಮತ್ತು ಅದರಲ್ಲಿ ಇರುವ ಈ ಸಾಕ್ಷಿಯ ಸಹಿಯನ್ನು **ನಿಪಿ-141(ಎ)** ಎಂಬುದಾಗಿ ಗುರುತಿಸಿದೆ. ಆಸ್ತಿ ಸಂಖ್ಯೆ 1072 ಸಂಖ್ಯೆಗೆ ಸಂಬಂಧಿಸಿದ ರಶೀದಿಯನ್ನು **ನಿಪಿ-142** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-142(ಎ)** ಎಂದು ಗುರುತಿಸಿದೆ. ಖಾತಾಪತ್ರವನ್ನು **ನಿಪಿ-143** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-143(ಎ)** ಎಂದು ಗುರುತಿಸಿದೆ.

42. ಕೆನರಾ ಬ್ಯಾಂಕ್ ಕೋರಮಂಗಲ ಶಾಖೆ ರವರು ಶ್ರೀಮತಿ ಕೆ.ಎ ಇಂದಿರಾ ರವರಿಗೆ ಸಾಲವು ಮಂಜೂರಾಗಿದೆ ಎಂಬುದಾಗಿ ಮಾಹಿತಿ ನೀಡಿರುವ ಬಗ್ಗೆ ಇರುವ ದಾಖಲೆಯನ್ನು **ನಿಪಿ-144** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-144(ಎ)** ಎಂದು ಗುರುತಿಸಿದೆ.

43. ಮತ್ತೊಂದು ಕಟ್ಟಡದ ನಕಾಶೆಯನ್ನು **ನಿಪಿ-145** ಎಂದು ಮತ್ತು ಈ ಸಾಕ್ಷಿಯ

ಸಹಿಯನ್ನು **ನಿಪಿ-145(ಎ)** ಎಂಬುದಾಗಿ ಗುರುತಿಸಿದೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನೀಡಿರುವ ಸ್ವಾಧೀನಪತ್ರವನ್ನು **ನಿಪಿ-146** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-146(ಎ)** ಎಂಬುದಾಗಿ ಗುರುತಿಸಿದೆ.

44. ಆರೋಪಿಯು 56,700/- ರೂಪಾಯಿಗಳನ್ನು ಕಟ್ಟಿರುವ ಬಗ್ಗೆ ಇರುವ ರಶೀದಿಯನ್ನು **ನಿಪಿ-147** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-147(ಎ)** ಎಂಬುದಾಗಿ ಗುರುತಿಸಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನೀಡಿರುವ ಮತ್ತೊಂದು ದಾಖಲೆಯನ್ನು **ನಿಪಿ-148** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-148(ಎ)** ಎಂದು ಮತ್ತು ಇದಕ್ಕೆ ಸಂಬಂಧಿಸಿದ ಹಿಂಬರಹವನ್ನು **ನಿಪಿ-149** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-149(ಎ)** ಎಂದು ಗುರುತಿಸಿದೆ. ನಿಪಿ-148 ರಲ್ಲಿ 71,500/- ರೂಪಾಯಿಗಳನ್ನು ಡಿ.ಡಿ. ಸಂಖ್ಯೆ 0643119 ರ ಮೂಲಕ ಆರೋಪಿಯು ಪಾವತಿ ಮಾಡಿದ್ದಾರೆ ಎಂದು ಮಾಹಿತಿಯು ಇದೆ.

45. ದಿನಾಂಕ 19.02.2008 ರಂದು ಬಿ.ಬಿ.ಎಂ.ಪಿ ಕಮಿಷನರ್ ರವರಿಗೆ 5025/- ರೂಪಾಯಿಗಳನ್ನು ಕಟ್ಟಿರುವ ಬಗ್ಗೆ ಇರುವ ದಾಖಲೆಯನ್ನು **ನಿಪಿ-150** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-150(ಎ)** ಎಂದು ಗುರುತಿಸಿದೆ.

46. ಆಸ್ತಿ ಸಂಖ್ಯೆ 1072 ಆಸ್ತಿಗೆ ಸಂಬಂಧಿಸಿದ ಮತ್ತೊಂದು ರಶೀದಿಯನ್ನು **ನಿಪಿ-151** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-151(ಎ)** ಎಂದು ಮತ್ತು Refund of initial deposit for non allotees ಎಂಬ ತಲೆಬರಹ ಇರುವ ದಾಖಲೆಯನ್ನು **ನಿಪಿ-152** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-152(ಎ)** ಎಂಬುದಾಗಿ ಗುರುತಿಸಿದೆ. ಮತ್ತೊಂದು ಕಟ್ಟಡದ ನಕಾಶೆಯನ್ನು **ನಿಪಿ-153** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-153(ಎ)** ಎಂದು ಗುರುತಿಸಿದೆ.

47. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ನೀಡಿರುವ ದಾಖಲೆಗಳನ್ನು **ನಿಪಿ-154** ಮತ್ತು **ನಿಪಿ-155** ಎಂದು ಮತ್ತು ಈ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ **ನಿಪಿ-154(ಎ)** ಮತ್ತು **ನಿಪಿ-155(ಎ)** ಎಂದು ಗುರುತಿಸಿದೆ. ಒಳಚರಂಡಿ ಸಂಪರ್ಕವನ್ನು ನೀಡಲಾಗಿದೆ ಎಂಬುದಾಗಿ ನಮೂದು ಇರುವ ದಾಖಲೆಗಳನ್ನು **ನಿಪಿ-156** ಮತ್ತು **ನಿಪಿ-157** ಎಂದು ಮತ್ತು ಈ ಸಾಕ್ಷಿಯ ಸಹಿಗಳನ್ನು **ನಿಪಿ-156(ಎ)** ಮತ್ತು **ನಿಪಿ-157(ಎ)** ಎಂದು ಗುರುತಿಸಿದೆ.

48. ಮತ್ತೊಂದು ಕಟ್ಟಡದ ನಕ್ಷೆಯನ್ನು **ನಿಪಿ-158** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-158(ಎ)** ಎಂದು ಮತ್ತು ಒಳಚರಂಡಿ ಸಂಪರ್ಕವನ್ನು ನೀಡಿದ ಬಗ್ಗೆ ಇರುವ ದಾಖಲೆಯನ್ನು **ನಿಪಿ-159** ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು **ನಿಪಿ-159(ಎ)** ಎಂದು ಗುರುತಿಸಿದೆ.

**ಈ ಹಂತದಲ್ಲಿ ಆರೋಪಿ ಪರ ವಕೀಲರಾದ ಶ್ರೀ ಪಿ.ಕೆ.ಎಸ್ ವಕೀಲರು ಎದ್ದು ನಿಂತು "ಈ ಸಾಕ್ಷಿಯ ಮೂಲಕ ನಿಶಾನೆಗಳನ್ನಾಗಿ ಗುರುತು ಮಾಡಿರುವ ದಾಖಲೆಗಳ ಬಗ್ಗೆ ತಮ್ಮ ಯಾವುದೇ ತಕರಾರುಗಳು ಇರುವುದಿಲ್ಲ, ಆದರೆ ಕೇವಲ ಮಹಜರ್ ದಾಖಲೆಗೆ ಮಾತ್ರ ತಮ್ಮ ತಕರಾರು ಇದೆ ಎಂದು ನುಡಿದಿದ್ದಾರೆ. ಇದರ ಜೊತೆಗೆ ಶ್ರೀ ಪಿ.ಕೆ.ಎಸ್ ವಕೀಲರು ಉಳಿದ ದಾಖಲೆಗಳನ್ನು ನಿಶಾನೆಗಳನ್ನಾಗಿ ಗುರುತಿಸಲು ತಮ್ಮ ಯಾವುದೇ ತಕರಾರುಗಳು ಇರುವುದಿಲ್ಲ ಎಂಬುದಾಗಿ ಸಹಾ ನುಡಿದಿದ್ದಾರೆ ಆದ್ದರಿಂದ ಈ ಕೆಳಕಂಡ ದಾಖಲೆಗಳನ್ನು ಆರೋಪಿ ಪರ ವಕೀಲರಾದ ಶ್ರೀ ಪಿ.ಕೆ.ಎಸ್ ವಕೀಲರ ಸಮ್ಮತಿಯ ಮೇರೆಗೆ ನಿಶಾನೆಗಳನ್ನಾಗಿ ಗುರುತಿಸಲಾಯಿತು.**

1) NECS- mandate form ಅನ್ನು **ನಿಪಿ-160** ಎಂದು,

2) ಉದಯಭಾರತಿ deposit ರಶೀದಿಯನ್ನು **ನಿಪಿ-161** ಎಂದು,

3) ಅದೇ ರೀತಿ State bank of mysuru ರವರು ನೀಡಿರುವ ರಶೀದಿಯನ್ನು **ನಿಪಿ-162** ಎಂದು,

4) Share certificate ಅನ್ನು **ನಿಪಿ-163** ಎಂದು,

5) ಉಪ-ಆಯುಕ್ತರು, ಮುದ್ರಾಂಕಗಳ ಅಪಮೌಲ್ಯ ತನಿಖಾ ವಿಭಾಗದವರು ನೀಡಿರುವ ದಾಖಲೆಗಳನ್ನು **ನಿಪಿ-164** ಮತ್ತು **ನಿಪಿ-165** ಎಂದು,

6) ಒಕ್ಕಲಿಗರ ಸಂಘದವರು ನೀಡಿರುವ ಆರೋಪಿಗೆ ಸಂಬಂಧಿಸಿದಂತೆ ಸದಸ್ಯತ್ವದ ಕಾರ್ಡ್ ಅನ್ನು **ನಿಪಿ-166** ಎಂದು ಮತ್ತು ಆರೋಪಿಗೆ ಸಂಬಂಧಿಸಿದ permanent account card ಅನ್ನು **ನಿಪಿ-167** ಎಂದು,

7) ಆರೋಪಿಯ ಮಗನಿಗೆ ಸಂಬಂಧಿಸಿದಂತೆ ಇರುವ ಒಕ್ಕಲಿಗರು ಸಂಘದವರು ನೀಡಿರುವ ಸದಸ್ಯತ್ವದ ಕಾರ್ಡ್ ಅನ್ನು **ನಿಪಿ-168** ಎಂದು,

8) ಆರೋಪಿಯ ಮಗನ ಹೆಸರಿನಲ್ಲಿ ಇರುವ ಕೆಎ-01-ಇಎಫ್-9925 ವಾಹನಕ್ಕೆ ಸಂಬಂಧಿಸಿದ RC ಪುಸ್ತಕವನ್ನು **ನಿಪಿ-169** ಎಂದು ಮತ್ತು ಆರೋಪಿಯು ಬರೆದಿರುವ

ನಿವೇದನೆ ಎಂಬ ತಲೆಬರಹ ಇರುವ ದಾಖಲೆಯನ್ನು **ನಿಪಿ-170** ಎಂದು,

9) DIG ರವರು ಬೆಂಗಳೂರು ಕಮಿಷನರ್ ರವರಿಗೆ ಬರೆದಿರುವ ಪತ್ರವನ್ನು **ನಿಪಿ-171** ಎಂದು ಮತ್ತು ಕ್ಯಾಶ್ ಬಿಲ್ಲನ್ನು **ನಿಪಿ-172** ಮತ್ತು **ನಿಪಿ-173** ಎಂದು,

10) Form No.116 ಅನ್ನು **ನಿಪಿ-174** ಎಂದು,

11) FDP 9/99 ಪ್ರಕರಣದಲ್ಲಿ ಹಾಕಿರುವ ಪ್ರಮಾಣಪತ್ರವನ್ನು ಮತ್ತು ಒಂದು ಅರ್ಜಿಯನ್ನು ಕ್ರಮವಾಗಿ **ನಿಪಿ-175** ಮತ್ತು **ನಿಪಿ-176** ಎಂದು ಮತ್ತು RSA 2451/2005 ಪ್ರಕರಣದಲ್ಲಿ ಹಾಕಿರುವ ಅರ್ಜಿಯನ್ನು **ನಿಪಿ-177** ಎಂದು ಮತ್ತು ನಿರ್ವಹಣಾ ನ್ಯಾಯ ಮಂಡಳಿಯವರು ನೀಡಿರುವ ಆದೇಶವನ್ನು **ನಿಪಿ-178** ಎಂದು ಗುರುತಿಸಿದೆ.

12) ಎರಡು ಕ್ರಯಪತ್ರಗಳ ಫೋಟೊಪ್ರತಿಗಳನ್ನು **ನಿಪಿ-179** ಮತ್ತು **ನಿಪಿ-180** ಎಂದು,

13) ಜ್ಞಾಪನವನ್ನು **ನಿಪಿ-181** ಎಂದು ಮತ್ತು ಅಧಿಸೂಚನೆಯನ್ನು **ನಿಪಿ-182** ಎಂದು ಮತ್ತು ದೃಢೀಕರಣಪತ್ರವನ್ನು **ನಿಪಿ-183** ಎಂದು ಮತ್ತು ಅಧಿಕಾರಪತ್ರವನ್ನು **ನಿಪಿ-184** ಎಂದು ಮತ್ತು ಪ್ರಮಾಣಪತ್ರವನ್ನು **ನಿಪಿ-185** ಎಂದು ಗುರುತಿಸಿದೆ.

14) ಕರ್ನಾಟಕ ಸಾಹಿತ್ಯ ಪರಿಷತ್ ರವರು ನೀಡಿರುವ ಆರೋಪಿಗೆ ಸಂಬಂಧಿಸಿದ ಆಜೀವ ಸದಸ್ಯತ್ವದ ಗುರುತಿನ ಚೀಟಿಯನ್ನು **ನಿಪಿ-186** ಎಂದು ಗುರುತಿಸಿದೆ.

**<u>ಸೂಚನೆ:</u> ನಿಪಿ-160** ರಿಂದ **ನಿಪಿ-186 ಎಂದು ಗುರುತು ಆಗಿರುವ ಎಲ್ಲಾ ದಾಖಲೆಗಳನ್ನು ಮಾನ್ಯ ಆರೋಪಿ ಪರ ವಕೀಲರ ಸಮ್ಮತಿಯ ಮೇರೆಗೆ ಗುರುತು ಮಾಡಲಾಗಿದೆ.**

**<u>ಪಾಟೀಸವಾಲು- ಆರೋಪಿ ಪರವಾಗಿ ಶ್ರೀ ಪಿ.ಕೆ.ಎಸ್. ವಕೀಲರಿಂದ:</u>**

49. ಈ ಪ್ರಕರಣಕ್ಕಿಂತ ಮೊದಲು ಯಾವುದೇ ಪ್ರಕರಣಗಳಲ್ಲಿ ಲೋಕಾಯುಕ್ತ ಪೊಲೀಸರು ನಡೆಸಿರುವ ಯಾವುದೇ ದಾಳಿ ಅಥವಾ Trap ದಾಳಿಗಳಲ್ಲಿ ನಾನು ಪಂಚಸಾಕ್ಷಿದಾರನಾಗಿ (panch witness) ಆಗಿ ಭಾಗವಹಿಸಿರುವುದಿಲ್ಲ.

50. ದಿನಾಂಕ 31.05.2013 ರ ನಂತರ ನಾನು ಮತ್ತೆ ಬೆಂಗಳೂರಿನ ಲೋಕಾಯುಕ್ತ ಕಛೇರಿಗೆ ಹೋಗಿದ್ದೇನೋ ಹೇಗೆ ಎಂದರೆ ಈ ಪ್ರಕರಣದಲ್ಲಿ Raid ಆದ ನಂತರ ನಾನು ಮತ್ತೆ ಆ ಲೋಕಾಯುಕ್ತ ಕಛೇರಿಗೆ ಹೋಗಿರುವುದಿಲ್ಲ.

51. ಮಹಜರ್ ಮಾಡಿದ ಸಮಯದಲ್ಲಿ ಆ ಮನೆಯಲ್ಲಿ ದೊರಕಿದ ವಸ್ತುಗಳ ಬಗ್ಗೆ

ಪೊಲೀಸರು ಮಹಜರ್ ನಲ್ಲಿ ನಮೂದು ಮಾಡಿಕೊಂಡರು ಮತ್ತು ಆ ರೀತಿ ಮಹಜರ್ ನಲ್ಲಿ ನಮೂದು ಮಾಡಿಕೊಂಡ ವಸ್ತುಗಳ ನಿಜವಾದ ಮಾಲೀಕರು ಯಾರು ಎಂಬ ಬಗ್ಗೆ ತನಿಖೆಯನ್ನು ಪೊಲೀಸರು ಆ ಸಮಯದಲ್ಲಿ ನನ್ನ ಸಮಕ್ಷಮದಲ್ಲಿ ಮಾಡಿರುವುದಿಲ್ಲ.

52. ಮಹಜರ್ ನಲ್ಲಿ ನಮೂದು ಮಾಡಿದ ವಸ್ತುಗಳ ಮೌಲ್ಯದ ಬಗ್ಗೆ ಮತ್ತು ಆ ಮೌಲ್ಯವನ್ನು ಯಾವ ರೀತಿ ಮಾಡಲಾಯಿತು ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದರೆ ಆ ವಸ್ತುಗಳ ಬೆಲೆ ಅಥವಾ ಮೌಲ್ಯವನ್ನು ಪೊಲೀಸರು ಹೇಳಿದರು ಮತ್ತು ನಾನು ಮತ್ತು ಇನ್ನೊಬ್ಬ ಸಾಕ್ಷಿದಾರರು ಅವುಗಳನ್ನು ನೋಡಿ ಆ ವಸ್ತುಗಳ ಅಂದಾಜು ಬೆಲೆಯು ಅಥವಾ ಮೌಲ್ಯವು ಪೊಲೀಸರು ಹೇಳಿದಷ್ಟು ಇರಬಹುದು ಎಂಬುದಾಗಿ ನಾವು ಹೇಳಿದ್ದೇವೆ.

53. ಮಹಜರ್ ನಲ್ಲಿ ನಮೂದು ಮಾಡಿರುವ ಚಿನ್ನ ಮತ್ತು ಬೆಳ್ಳಿಯ ವಸ್ತುಗಳ ಅಂದಾಜು ಬೆಲೆಯನ್ನು ನಿರ್ಧಾರ ಮಾಡಲು ಯಾರಾದರೂ ಪರಿಣಿತರು ಆ ದಿನ ಬಂದಿದ್ದರೋ ಹೇಗೆ ಎಂದರೆ ಓರ್ವ ಹರೀಶ ಎನ್ನುವ ಅಕ್ಕಸಾಲಿಗರು ಬಂದಿದ್ದರು. ಆ ಚಿನ್ನ ಮತ್ತು ಬೆಳ್ಳಿಯ ವಸ್ತುಗಳ ಅಂದಾಜು ಬೆಲೆಯ ಬಗ್ಗೆ ನಾನು ನನ್ನ ಅಭಿಪ್ರಾಯವನ್ನು ಹೇಳಿರುವುದಿಲ್ಲ ಎಂದರೆ ಸದರಿ ಅಕ್ಕಸಾಲಿಗರು ಆ ವಸ್ತುಗಳ ಅಂದಾಜು ಬೆಲೆಗಳನ್ನು ಹೇಳಿದರು ಮತ್ತು ನಾನು ಅಷ್ಟು ಬೆಲೆ ಇರಬಹುದು ಎಂದು ಹೇಳಿದ್ದೇನೆ. ಸದರಿ ಚಿನ್ನ ಮತ್ತು ಬೆಳ್ಳಿಯ ವಸ್ತುಗಳ ಅಂದಾಜು ಬೆಲೆಯನ್ನು ಆ ಮಹಜರ್ ಮಾಡಿದ ದಿನಾಂಕದಂದು ಇದ್ದ ಮಾರುಕಟ್ಟೆ ದರದ ಆಧಾರದ ಮೇರೆಗೆ ಹರೀಶ ರವರು ನಿಗಧಿಪಡಿಸಿದ್ದಾರೆ.

54. ಆ ಮಹಜರ್ ಮಾಡಿದ ಕಾಲದಲ್ಲಿ ಪೊಲೀಸರು ಆ ಚಿನ್ನ ಮತ್ತು ಬೆಳ್ಳಿಯ ವಸ್ತುಗಳನ್ನು ಯಾವಾಗ ಖರೀದಿ ಮಾಡಲಾಗಿದೆ ಮತ್ತು ಅವುಗಳನ್ನು ಖರೀದಿ ಮಾಡಿದ ವರ್ಷಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಬೆಲೆ ಪ್ರತಿ ಗ್ರಾಂಗೆ ಅಥವಾ ಪ್ರತಿ ತೊಲಕ್ಕೆ ಎಷ್ಟು ಇತ್ತು ಎಂಬ ಮಾಹಿತಿಗಳನ್ನು ನಮ್ಮ ಬಳಿ ಹೇಳಿರುವುದಿಲ್ಲ.

55. ಮಹಜರ್ ನಲ್ಲಿ ನಮೂದು ಮಾಡಿರುವ ಆ ಚಿನ್ನ ಮತ್ತು ಬೆಳ್ಳಿಯ ವಸ್ತುಗಳು ಯಾವ ರೂಪದಲ್ಲಿ ಬಂದಿವೆ ಮತ್ತು ಅವುಗಳು ದಾನವಾಗಿ ಬಂದಿವೆಯೋ ಅಥವಾ ಖರೀದಿ ಮಾಡಲಾಗಿದೆಯೋ ಎಂಬ ವಿವರಗಳನ್ನು ನಮ್ಮ ಸಮಕ್ಷಮದಲ್ಲಿ ಪೊಲೀಸರು ಆರೋಪಿಯನ್ನು ಕೇಳಿ ಪಡೆದುಕೊಂಡಿದ್ದಾರೆ.

56. ಆ ದಿನ ಯಾವ ಅಧಿಕಾರಿಯ ಮನೆಯ ಮೇಲೆ ದಾಳಿ ಮಾಡಲು ಹೋಗುತ್ತಾ ಇದ್ದೇವೆ ಎಂಬುದಾಗಿ ಪೊಲೀಸರು ನಮಗೆ ಹೇಳಿರಲಿಲ್ಲ ಎಂದರೆ ಆ ಲೋಕಾಯುಕ್ತ

ಕಛೇರಿಯಿಂದ ಹೊರಟು ವಾಹನದಲ್ಲಿ ಹೋಗುವ ಸಮಯದಲ್ಲಿ ಪೊಲೀಸರು ಆ ವಿಷಯವನ್ನು ನಮಗೆ ಹೇಳಿದ್ದಾರೆ.

57. ಈ ಮಹಜರ್ ಮಾಡಿದ ಕಾಲದಲ್ಲಿ ನಾನು ಸರ್ಕಾರಿ ನೌಕರನಾಗಿ ಇದ್ದ ಕಾರಣದಿಂದ ಪೊಲೀಸರ ಒತ್ತಡಕ್ಕೆ ಮಣಿದು ನಾನು ಮಹಜರ್ ಗೆ ಸಾಕ್ಷಿದಾರನಾಗಿ ನನ್ನ ಸಹಿಯನ್ನು ಮಾಡಿದ್ದೇನೆ ಮತ್ತು ನನಗೆ ಯಾವುದೇ ವಿಷಯಗಳು ಗೊತ್ತಿರುವುದಿಲ್ಲ ಮತ್ತು ಪೊಲೀಸರು ಯಾವುದೇ ವಿಷಯದ ಸಂಬಂಧವಾಗಿ ನನ್ನ ಅಭಿಪ್ರಾಯಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸುಳ್ಳು.

58. ಪೊಲೀಸರ ಪರವಾಗಿ ನಾನು ಸಾಕ್ಷ್ಯ ನುಡಿಯದೇ ಇದ್ದರೆ ನನಗೆ ತೊಂದರೆ ಆಗುತ್ತದೆ ಮತ್ತು ನನ್ನ ಪಿಂಚಣಿ ಹಣಕ್ಕೆ ಏನಾದರೂ ತೊಂದರೆ ಆಗುತ್ತದೆ ಎಂಬ ಭಯದಿಂದ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

**ಮರುವಿಚಾರಣೆ:** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ